ಶ್ರೀ ಡಿ. ಕೆ. ನಾಯಕರ್ : ಮೈಸೂರು ಸಿಟಿಗೆ ಸುಮಾರು 30 ಗ್ಯಾಲನ್ ನೀರನ್ನು ಈಗಾಗಲೇ ಕೊಡುತ್ತಿದ್ದಾರೆ. ಬೇರೆ ಕಡೆ ಇಷ್ಟು ನೀರೂ ಸಿಗುತ್ತಿಲ್ಲ ಅಲ್ಲದೆ ಇಲ್ಲಿರುವ ಯೋಜನೆಯಂತೆ ಸ್ಟೋರೇಜು ಟ್ಯಾಂಕು ಕೆಲಸ ಪೂರ್ತಿ ಮಾಡ ಬೇಕಾಗಿದೆ. ಇದರ ಕೆಲಸಗಳಾಗುತ್ತಿವೆ.

ಶ್ರೀ ಕೆ. ವೆಂಕಟಲಿಂಗಯ್ಯ : ಮೈಸೂರಿಗೆ 30 ಗ್ಯಾಲನ್ ನೀರನ್ನು ಕೊಡ ಲಾಗುತ್ತಿದೆ. ಇತರ ಕಡೆಗಳಿಗಿಂತ ವಾಸಿ ಎಂದು ಸರಕಾರದವರು ಹೇಳುವುದು ಸರಿಯಲ್ಲ. ಕೆಲವು ಕಡೆ ಜನಕ್ಕೆ ಇಲ್ಲಿ ನೀರು ಸಿಗುತ್ತಲೇ .....ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಡಿ. ಕೆ. ನಾಯಕರ್ : ಇಲ್ಲಿ ನೀರು ಕೊಡಬೇಕೆಂದು ಸ್ಟೋರೇಜು ಟ್ಯಾಂಕು ಮಾಡಿನಲು ತಕ್ಕ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಮತ್ತು ಇದರ ಕೆಲಸ ಗಳು ನಡೆಯುತ್ತಿವೆ.

ಅಧ್ಯಕ್ಷರು : ಪ್ರಶ್ನೆ ನಂ. 293 ನಾನು ಹಾಕುತ್ತೀನೆ.

**Varahi Hydro Electric and Irrigation Projects*

293. SRI *A.* G. KODGI (Baindur)—

Will the Chief Minister be pleased to state ;—

(*a*) the stage at which the Varahi Hydro-electric Project and Varahi Irrigation project are pending;

(*b*) the date on which it is proposed to commence the work in respect of these two Projects ?

SRI H. C. SREEKANTIAH (Minister of state for Electricity) on behalf of SRI D. DEVARAJ URS(Chief Minister).—

(*a*) Government have decided to construct Varahi Project as essentially a power Project with some Irrigation benefits to South Kanara District.

(*b*) The work can be started as soon as funds become available.

ಶ್ರೀ ಕೋಣಂದೂರು ಲಿಂಗಪ್ಪ : ಕಳೆದ ಮೂರು ವರ್ಷಗಳಿಂದಲೂ ವರಾಹಿ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಖಚಿತವಾಗಿ ಯಾವಾಗ ಇದರ ಕೆಲಸ ಆರಂಭವಾಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

‡ ಶ್ರೀ ಹೆಚ್ ಸಿ. ಶ್ರೀಕಂಠಯ್ಯ : ಯಾವ ದಿನ ಯಾವ ತಾರೀಖು ಎಂದು ಹೇಳಲಾಗುವುದಿಲ್ಲ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಕಾರ್ಯಗತ ಮಾಡಬೇಕಾಗುತ್ತದೆ. ಪ್ರಾಜಿಕ್ಟಿಗೆ ಹಣ ಒದಗಿಸಿದಾಗ ಇದನ್ನು ಆರಂಭ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ : ದಕ್ಷಿಣ ಕನ್ನಡ ಜಿಲ್ಲೆಯ ನೀರಾವರಿ ಯೋಜನೆಗಳು ಕೂಡ ದುಡ್ಡಿಲ್ಲದೆ ತಡವಾಗುತ್ತಿದೆ. ಇದಲ್ಲದೆ ನಮ್ಮ ಶಿವಮೊಗ್ಗಾ ಜಿಲ್ಲೆಗೂ ಇದರಿಂದ ಅನುಕೂಲಗಳಾಗುವುದರಿಂದ ಇದನ್ನು ಬೇಗನೇ ಮಾಡಲು ಪರಿಶೀಲಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಇದನ್ನು ಪರಿಶೀಲನೆ ಮಾಡುವಾಗ ಇದು ಅನ್ ಎಕನಾಮಿಕಲ್ ಎಂದು ತೀರ್ಮಾನಕ್ಕೆ ಬರಲಾಯಿತು. ಪುನಃ ಮಾನ್ಯ ಸದಸ್ಯರು ಹೇಳುವುದರಿಂದ ಪರಿಶೀಲನೆ ಮಾಡಲು ಯೋಚನೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ :—ವರಾಹಿ ಯೋಜನೆಯಿಂದ ನೀರನ್ನು ಲಿಫ್ಟ್ ಇರಿಗೇಷನ್ ಮೂಲಕ ಒದಗಿಸಿದರೆ ನಮ್ಮ ತುಮಕೂರು ಜಿಲ್ಲೆಯ ಸಿರಾ ಪಾವಗಡ ಇತ್ಯಾದಿ ಭಾಗಗಳಿಗೆ ಸ್ವಲ್ಪ ಮಟ್ಟಿನ ಅನುಕೂಲಗಳಾಗುತ್ತವೆ. ಇದರ ಬಗ್ಗೆ ಸರಕಾರ ಯೋಚನೆ ಮಾಡುತ್ತಾರೆಯೇ ? ಮತ್ತು ನೀರನ್ನು ಇಲ್ಲಿಯವರೆಗೂ ತಿರುಗಿಸಲಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :—ಯಾವ ನೀರನ್ನು ಎಲ್ಲಿಗೆ ತಿರುಗಿಸಬೇಕು ಎನ್ನುವುದರ ಬಗ್ಗೆ ಎಲ್ಲ ಕಡೆಯೂ ಪರಿಶೀಲನೆ ಮಾಡುತ್ತಿದ್ದಾರೆ ಇಂದು ಯಂತ್ರಯುಗ, ಟೆಕ್ನಾಲಜಿ ಹಾಗೂ ಸೈನ್ಸ್ ಬೆಳೆಯುತ್ತಿದೆ. Technology and science has so much advanced. ಒಂದು ಸಾರಿ ಡಾ. ಅಂಬೇಡ್‌ಕರ್ ರವರು ಬೆಂಗಳೂರಿಗೆ ಬಂದಿದ್ದಾಗ ಒಂದು ಮಾತು ಹೇಳಿದರು. ಇಲ್ಲಿ ಸ್ವಲ್ಪ ಮಳೆಯ ಅಭಾವವಿದೆ ಎಂದು ಯಾರೋ ಹೇಳಿದಾಗ. ಅಲ್ಲಿ ಮೋಡಗಳೂ ಇದ್ದವು. ಇದರ ನೀರು ಪಶ್ಚಿಮ ಘಟ್ಟಕ್ಕೆ ಹರಿದುಹೋಗುತ್ತಿತ್ತು ಆಗ ಅವರು why not blast all Westeren Ghates by an atomic Bomb and see the clouds break quickly and pour water. So even

that is possible. Varahi can be diverted or lifted. ಹೀಗೆ ವರಾಹಿ ಯೋಜನೆಯನ್ನು ಡೈವರ್ಟ್ ಮಾಡಬೇಕೆಂದು ಹೇಳುತ್ತಾರೆ. ಇದರ ಖರ್ಚು ಇತ್ಯಾದಿಗಳನ್ನು ನೋಡಬೇಕಾಗುತ್ತದೆ. ಇದರಲ್ಲಿ ಇನ್ನೂ ಕೆಲವು ರೆಸ್ಪ್ರೈನಿಂಗು ಫ್ಯಾಕ್ಟರುಗಳೂ ಇವೆ. ಎರಡನೇದು ಮುಖ್ಯವಾಗಿ ವರಾಹಿ ಯೋಜನೆಯಲ್ಲಿ ಎರಡು ವಿಚಾರಗಳಿವೆ. ಒಂದು ವಿದ್ಯುತ್ ಉತ್ಪಾದನೆ ಮಾಡುವುದು ಮತ್ತು ಎರಡನೇದು ಇದರ ನೀರನ್ನು ನೀರಾವರಿಗಾಗಿ ಉಪಯೋಗ ಮಾಡುವುದು. ಇದರ ಬಗ್ಗೆ ಯಾವ ರೀತಿ ಉಪಯೋಗ ಮಾಡಲು ಸಾಧ್ಯವಿದೆ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಇದನ್ನು ಪರೀಕ್ಷೆ ಮಾಡಿ ನೋಡ ಬೇಕಾಗುತ್ತದೆ.

2-00 P. M.

Allotment of denatured Spirit in Belgaum

99. SRI B. B. SAYANAK (Belgaum) :—

Will the Minister for Excise and Labour be pleased to state :—

(*a*) whether it is a fact that the Belgaum District Spirit Supply and Spirituous Preparation Dealers Association had submitted representation to Government on 22nd June 1974 and 4th September 1974 ;

(*b*) if so, the action taken thereon ;

(*c*) whether it is a fact that the quota of denatured spirit under D. L. 6 Licences of Sri N. K. Saith and Sri S. H. Mandagi was 1305 and 356 litres respectively in the year 1972-73, and 2000 and 3355 litres respectively in year 1973-74,

(*d*) whether it is a fact that the quota of denatured spirit under DL-3 Licences of M/s. Khinjibhai Raoji and M/s. Mandagi Brothers, ESSO Dealers, Belgaum was cancelled and transferred to DL. 6 licences of Sri N. K. Saith and Sri S. H. Mandagi in the year 1973-74?